**ಕರ್ನಾಟಕ ಬ್ಯಾಂಕ್ ಬಡ್ಡಿ ದರ ಏರಿಕೆ**

ಮಂಗಳೂರು: ಕರ್ನಾಟಕ ಬ್ಯಾಂಕ್ ದೇಶೀಯ ಮತ್ತು ಎನ್‌ಆರ್‌ಇ ಠೇವಣಿಗಳ ಮೇಲಿದ್ದ ಶೇ.7.40 ಬಡ್ಡಿ ದರವನ್ನು ಶೇ.7.50ಗೆ ಏರಿಕೆ ಮಾಡಿದೆ. 10 ಕೋಟಿ ರೂ. ವರೆಗಿನ ಠೇವಣಿಗಳಿಗೆ ಈ ಬಡ್ಡಿ ದರ ಅನ್ವಯವಾಗಲಿದೆ. ಡಿ.28ರಿಂದಲೇ ಜಾರಿಯಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

# ಯುವಕರ ಕನಸುಗಳಿಗೆ ಹೊಸರೆಕ್ಕೆ ಮೂಡಿಸಿದ ಯುವ ಸಂಗಮ

## ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಯುವ ಪ್ರವಾಹ | ಹೆಜ್ಜೆಗಳು ಸದೃಢವಾಗಿರಬೇಕು, ಆಲೋಚನೆಗಳು ಸಕಾರಾತ್ಮಕವಾಗಿರಬೇಕು

■ ರವೀಂದ್ರ ಎಸ್. ದೇಶಮುಖ್ ಕಗ್ಗೋಡು (ವಿಜಯಪುರ)

ಯುವ ಶಕ್ತಿಯ ಆಶಯಗಳಿಗೆ ಶಕ್ತಿ ತುಂಬುವ ಚಿಂತನೆಗಳು, ನವೋತ್ಸಾಹ ಅರಳಿಸುವಂಥ ಪ್ರೇರಣಾದಾಯಕ ಸಂಗತಿಗಳು, ಜೀವನಕ್ಕೊಂದು ಸ್ಪಷ್ಟಗುರಿ ಹಾಕಿಕೊಂಡು ಸಾಧನಾ ಪಥದಲ್ಲಿ ಸಾಗಲು ದಿಕ್ಸೂಚಿ ತೋರಿದ ಸಾಧಕರು, ಸಕಾರಾತ್ಮಕ ವಿಚಾರಗಳನ್ನು ಸ್ವೀಕರಿಸಿದ ಬಳಿಕ 'ಇಂದು' ಕಷ್ಟಪಟ್ಟು, ನಾಳೆ'ಗಳನ್ನು ಚೆಂದವಾಗಿಸುತ್ತೇವೆ ಎಂಬ ತರುಣರ ಹೊಸ ಸಂಕಲ್ಪ... ಹೀಗೆ ಕೌತುಕ, ಕುತೂಹಲ, ಉತ್ಸಾಹದ ವಾತಾವರಣಕ್ಕೆ ಸಾಕ್ಷಿಯಾದ ಯುವ ಸಂಗಮ ಯುವಕರ ಕನಸುಗಳಿಗೆ ಹೊಸ ರೆಕ್ಕೆ ಮೂಡಿಸುವಲ್ಲಿ ಯಶಸ್ವಿಯಾಯಿತು.

ಭಾರತೀಯ ಸಂಸ್ಕೃತಿ ಉತ್ಸವದ ಐದನೇ ದಿನವಾದ ಶುಕ್ರವಾರ ನಡೆದ ಯುವ ಸಂಗಮದಲ್ಲಿ ಹೈಸ್ಕೂಲ್- ಪದವಿಪೂರ್ವ, ಪದವಿ-ಸ್ನಾತಕೋತ್ತರ ಪದವಿ ವಿದ್ಯಾರ್ಥಿ- ವಿದ್ಯಾರ್ಥಿನಿಯರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡು ಮಾಹಿತಿ ಪಡೆದುಕೊಂಡರು.

ಯುವ ಸಂಗಮ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಬೆಂಗಳೂರು ಪಶ್ಚಿಮ ವಿಭಾಗ ಡಿಸಿಪಿ ರವಿ ಚನ್ನಣ್ಣವರ, ನಿಮ್ಮ ಬದುಕಿಗೆ ನೀವೇ ನಾಯಕರಾಗಿ! ಸಿನಿಮಾ ನೋಡುವಾಗ ನಾಯಕನ ಸ್ಥಾನದಲ್ಲಿ ನಿಮ್ಮನ್ನು ಕಲ್ಪಿಸಿಕೊಳ್ಳುತ್ತೀರಲ್ಲಾ? ಹಾಗಾದರೆ, ನಿಜ ಬದುಕಿನಲ್ಲೂ ನೀವೇ ನಾಯಕರಾಗಬೇಕು. ಸಾಧನೆ ಮಾಡುವ ತುಡಿತ, ಛಲ ಇದ್ದಲ್ಲಿ ಯಾವುದೂ ಅಸಾಧ್ಯವಲ್ಲ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಭಾರತ ವಿಕಾಸ ಸಂಗಮದ ರಾಷ್ಟ್ರೀಯ ಪ್ರೋಷಕ ಬಸವರಾಜ್ ಪಾಟೀಲ್ ಸೇಡಂ, ಇಂದಿನ ಯುವಪೀಳಿಗೆ



ವಿಜಯಪುರ ತಾಲೂಕಿನ ಕಗ್ಗೋಡದಲ್ಲಿ ನಡೆದ ಯುವ ಶಕ್ತಿ ಸಂಗಮ ಕಾರ್ಯಕ್ರಮದಲ್ಲಿ ವಿಜಯವಾಣಿ ಅಂಕಣಕಾರ ಡಾ. ಬಾಬು ಕೃಷ್ಣಮೂರ್ತಿ ಅವರನ್ನು ಸನ್ಮಾನಿಸಲಾಯಿತು.

### ಪ್ರಶಸ್ತಿ ಪ್ರದಾನ

ಉತ್ತರ ಪ್ರದೇಶದ ಅರುಣಿಮಾ ಸಿನ್ಹಾ (ಮಹಿಳಾ ಸಾಧನೆ), ಕರ್ನಾಟಕದ ರಾಜೇಶ್ವರಿ ಗಾಯಕ್ವಾಡ್ (ಕ್ರಿಕೆಟ್), ರಾಯಚೂರಿನ ರಮೇಶ ಬಲೀದ (ವ್ಯಕ್ತಿತ್ವ ವಿಕಸನ), ಧಾರವಾಡದ ಕ್ಯಾ.ಸಿ.ಎಸ್. ಆನಂದ (ವ್ಯಕ್ತಿತ್ವ ವಿಕಸನ), ಮಲಾಲ ಪ್ರಶಸ್ತಿ ಪುರಸ್ಕೃತೆ ಗದಗಿನ ಅಶ್ವಿನಿ ಅಂಗಡಿ ಅವರಿಗೆ ಪ್ರಶಸ್ತಿ ನೀಡಲಾಯಿತು.

### ಬಾಬು ಕೃಷ್ಣಮೂರ್ತಿಗೆ ರಾಜ್ಯ ಪ್ರಶಸ್ತಿ

ಅಜೇಯ, ಅದಮ್ಯ, ರುಧಿರಾಭಿಷೇಕ ಕೃತಿಗಳ ಮೂಲಕ ಕ್ರಾಂತಿಕಾರಿಗಳ ಬದುಕನ್ನು ನಾಡಿನ ಜನಮಾನಸಕ್ಕೆ ತಲುಪಿಸಿರುವ ಖ್ಯಾತ ಲೇಖಕ, ಪತ್ರಕರ್ತ ಮತ್ತು 'ವಿಜಯವಾಣಿ' ಅಂಕಣಕಾರ ಬಾಬು ಕೃಷ್ಣಮೂರ್ತಿ ಅವರಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸುನೀಲ್ ಶಾಸ್ತ್ರಿ, ಬಾಲಸುಬ್ರಹ್ಮಣ್ಯಂ ಪ್ರಶಸ್ತಿ ಪ್ರದಾನ ಮಾಡಿದರು.

ಇಲ್ಲಿಯೇ ಎಡವುತ್ತಿದ್ದು, ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರ ಎಂಬಂತೆ ವರ್ತಿಸುತ್ತಿದೆ. ಶಿಕ್ಷಣದ ಉದ್ದೇಶ ಏನು ಎಂಬುದೇ ಬಹುತೇಕ ತರುಣರಿಗೆ ತಿಳಿದಿಲ್ಲ. ನೀವು ಏತಕ್ಕೆ ಓದುತ್ತಿದ್ದೀರಿ?' ಎಂದು ಕೇಳಿದರೆ ನೌಕರಿಗಾಗಿ' ಎನ್ನುತ್ತಾರೆ. ಜ್ಞಾನಪ್ರಾಪ್ತಿ ಮತ್ತು ವ್ಯಕ್ತಿತ್ವ ರೂಪಿಸಿಕೊಳ್ಳುವುದು ಶಿಕ್ಷಣದ ಉದ್ದೇಶವಾಗಬೇಕೇ ಹೊರತು ಕೇವಲ ಉದ್ಯೋಗ ಪಡೆಯುವುದು ಗುರಿಯಾಗಬಾರದು ಎಂದರು.

ಡ್ರೋನ್ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುತ್ತಿರುವ ಮಂಡ್ಯದ ಗ್ರಾಮೀಣ ಯುವಪ್ರತಿಭೆ ಪ್ರತಾಪ್ ತಾವು ಸಾಗಿಬಂದ ಹಾದಿ ವಿವರಿಸಿದರು. ಮಾಜಿ ಕೇಂದ್ರ ಸಚಿವ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಪುತ್ರ ಸುನೀಲ್ ಶಾಸ್ತ್ರಿ ಮತ್ತು ಸಮಾಜ ಸುಧಾರಕ ಡಾ. ಆರ್. ಬಾಲಸುಬ್ರಮಣ್ಯಂ ರಾಷ್ಟ್ರ ನಿರ್ಮಾಣದಲ್ಲಿ ಯುವಕರ ಪಾತ್ರ, ಅದನ್ನು ನಿರ್ವಹಿಸುವಿಕೆಯ ಬಗೆಯನ್ನು ವಿವರಿಸಿದರು. ಮಾಜಿ ಸಚಿವ, ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ, ಭಾರತ ವಿಕಾಸ ಸಂಗಮದ ರಾಷ್ಟ್ರೀಯ ಸಂಚಾಲಕ ಕೆ.ಎನ್. ಗೋವಿಂದಾಚಾರ್ಯ ಉಪಸ್ಥಿತರಿದ್ದರು.

### ವಾಸ್ಕೋ ಡಿ ಗಾಮಾ ಭಾರತ ಕಂಡುಹಿಡಿಯಲಿಲ್ಲ!

ಯುವ ಜನತೆ ದೇಶದ ಇತಿಹಾಸ ಅರಿಯಬೇಕು. ಮೂಲ ಇತಿಹಾಸ ಮರೆಮಾಚಿ ನಾವಿಂದು ಅನ್ಯರು ಬರೆದ ಇತಿಹಾಸ ಅಭ್ಯಸಿಸುತ್ತಿದ್ದೇವೆ. ವಾಸ್ತವದಲ್ಲಿ ವಾಸ್ಕೋ ಡಿ ಗಾಮಾ ಭಾರತ ಕಂಡು ಹಿಡಿಯಲಿಲ್ಲ. ಆದಾಗ್ಯೂ ಇಂದಿಗೂ ನಾವದನ್ನೇ ನಂಬಿದ್ದೇವೆ. ವಾಸ್ಕೋಡಿ ಗಾಮಾ ಕಂಡು ಹಿಡಿಯುವ ಮೊದಲೇ ಭಾರತ ಇಲ್ಲಿತ್ತು. ಇಲ್ಲಿನ ನಾಗರಿಕತೆ ಸಾಕಷ್ಟು ಮುಂದುವರಿದಿತ್ತು. ಗಾಮಾ ಕೇಪ್ ಆಫ್ ಗುಡ್ ಹೋಪ್ ತಲುಪಿದಾಗ ಅಲ್ಲಿ ಭಾರತೀಯ ನಾವಿಕರು ಆತನಿಗೆ ಸಿಕ್ಕಾಗ ಆತ ಅಚ್ಚರಿಗೊಂಡು ಅವರನ್ನು ಪರಿಚಯಿಸಿಕೊಂಡ. ತನಗೂ ಭಾರತಕ್ಕೆ ಕರೆದೊಯ್ಯುವಂತೆ ಮನವಿ ಮಾಡಿದ. ಭಾರತೀಯ ನಾವಿಕರು ಆತನನ್ನು ಭಾರತಕ್ಕೆ ಕರೆತಂದು ದೇಶ ಪರಿಚಯಿಸಿದರು. ಇದು ವಾಸ್ತವ ಎಂದು ಹೆಗ್ಗಡದೇವನ ಕೋಟೆಯ ವಿಲೀಡ್ ಅಧ್ಯಕ್ಷ ಡಾ. ಆರ್. ಬಾಲಸುಬ್ರಹ್ಮಣ್ಯಂ ಇತಿಹಾಸದ ಪುಟ ಬಿಚ್ಚಿಟ್ಟರು.